ಕ್ಷೇತ್ರ ವಾರ್ತೆ

# ಕೆರೆ ಸಮ್ಮೇಲನ 2014

## ಕೆರೆಗಳ ಅಭಿವೃದ್ಧಿಗೆ ಸೂಕ್ತ ಯೋಜನೆಗಳು ಬೇಕು –ಶ್ರೀ ಶ್ರೀಗಳು

'ದೇಶಕ್ಕೆ ಮಾರಕವಾದ ನದೀ ಜೋಡನೆಯನ್ನು ಕೈಬಿಟ್ಟು ಕೆರೆಗಳನ್ನು ಹೆಚ್ಚು ಹೆಚ್ಚು ಅಭಿವೃದ್ಧಿಪಡಿಸಿದರೆ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ. ಪರಿಸರ ರಕ್ಷಣೆ ಮತ್ತು ಹಾಳುಬಿದ್ದ ಎಲ್ಲ ಕೆರೆಗಳನ್ನು ಸ್ವಚ್ಛಗೊಳಿಸಿದರೆ ನೀರಿನ ಸಮಸ್ಯೆ ನೀಗುತ್ತದೆ. ನದಿಗಳ ಸಂರಕ್ಷಣೆಗಳೂ ಸಾಧ್ಯ. ಮಹಾನಗರಗಳಲ್ಲಿ ಅನೇಕ ಕೆರೆಗಳು ಕಸದ ತೊಟ್ಟಿಗಳಾಗಿವೆ, ಕೆಲವು ನಿವೇಶನಗಳಾಗಿ ಮನೆಗಳ ನಿರ್ಮಾಣಗಳಾಗಿವೆ. ಈ ಕುರಿತು ಎಚ್ಚರ ವಹಿಸಬೇಕಾಗಿದೆ. ಮನುಷ್ಯನ ದುರಾಸೆಯಿಂದ ಪ್ರಕೃತಿಯ ಮೇಲೆ ಅನೇಕ ದುಃಷ್ಪರಿಣಾಮಗಳು ಆಗುತ್ತಿವೆ. ಕೆರೆಗಳ ಅಭಿವೃದ್ಧಿ ಕುರಿತು ಸೂಕ್ತವಾದ ಯೋಜನೆಗಳೇ ಇಲ್ಲ. ಅದ್ದರಿಂದ ಈ ಕುರಿತು ವಿಶೇಷ ಯೋಜನೆಗಳನ್ನು ರೂಪಿಸಬೇಕು' ಎಂದು ಶ್ರೀ ಶ್ರೀಗಳವರು ನವೆಂಬರ್ 15 ರಂದು ಶ್ರೀಮಠದಲ್ಲಿ ನಡೆದ ಕೆರೆ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಆಶೀರ್ವಚನವಿತ್ತರು.

> **ಭೋಗದ ಜೀವನ ಶೈಲಿ ಪರಿಸರದ ದೃಷ್ಟಿಯಿಂದ ಹಾನಿಕಾರಕ, ಭಾರತೀಯ ಸಂಸ್ಕೃತಿಗೂ ವಿರುದ್ಧ. ಇದನ್ನು ಬಿಟ್ಟು ಯೋಗದ ಶೈಲಿ ಅಳವಡಿಸಿ ಕೊಳ್ಳಬೇಕು. ಅಗತ್ಯಕ್ಕಿಂತ ಹೆಚ್ಚು ಪರಿಸರವನ್ನು ಮಲಿನಗೊಳಿಸುತ್ತಿದ್ದೇವೆ. ಇದರಿಂದ ಅಂತರ್ಜಲ ದಿನೇ ದಿನೇ ಕಡಿಮೆಯಾಗುತ್ತಿದೆ. ಇದನ್ನು ತಪ್ಪಿಸಲು ಪರಿಸರ ಸರಿರಕ್ಷಣೆ ಅಗತ್ಯ. ಸ್ವರ್ಣವಲ್ಲೀ ಶ್ರೀ ಶ್ರೀಗಳವರ 25 ವರ್ಷದ ಪರಿಸರದ ಕಾಳಜಿ, ಆ ಕುರಿತು ಹೋರಾಟ ನಮಗೆ ಆದರ್ಶವಾಗಲಿ**
>
> **– ಶ್ರೀ ಅನಂತ ಕುಮಾರ, ಕೇಂದ್ರ ಸಚಿವರು.**

ದಿವ್ಯಸಾನ್ನಿಧ್ಯ ವಹಿಸಿದ್ದ ಪರಮ ಪೂಜ್ಯ ಪೇಜಾವರ ಶ್ರೀ ಶ್ರೀಗಳವರು ಆಶೀರ್ವದಿಸುತ್ತಾ 'ಪರಿಸರ, ಕೆರೆ, ಗುಡ್ಡ, ಜಲಮೂಲಗಳ ಪಾಲನೆ, ಪೋಷಣೆ ಹಾಗೂ ಪೂಜಿಸುವುದರಿಂದ ಪುಣ್ಯಸಂಪಾದನೆಯೂ ಆಗುತ್ತದೆ. ಒಂದು ಗಿಡ ಹತ್ತು ಪುತ್ರರಿಗೆ ಸಮ ಎಂದು ಹೇಳಿದೆ. ಒಂದು ಗಿಡವನ್ನು ನಾಶ ಮಾಡಿದರೆ ಹತ್ತು ಮಕ್ಕಳನ್ನು ಕೊಲೆಮಾಡಿದಂತೆ ಆಗುತ್ತದೆ. ನಿತ್ಯ ಪರಿಸರದ ಮೇಲೆ ಆಗುತ್ತಿರುವ ಅತ್ಯಾಚಾರವನ್ನು ಸಮಾಜ, ಸರ್ಕಾರ ಹಾಗೂ ಸಂತರೆಲ್ಲರೂ ಸೇರಿ ನಿವಾರಿಸಬೇಕು' ಎಂದು ನುಡಿದರು.

ಮುಖ್ಯ ಆಹ್ವಾನಿತರಾದ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಡಾ॥ ವಾಮನಾಚಾರ್ಯ ಮಾತನಾಡಿ, 'ನೀರು ನಿಂತು ಹರಿಯಬೇಕು. ಅದರಿಂದ ನೀರು ತಿಳಿಯಾಗುತ್ತದೆ, ಮಣ್ಣಿನ ಸವೆತ ಆಗುವುದಿಲ್ಲ. ಸ್ವಲ್ಪ ಹೂಳು ಕೆರೆಯಲ್ಲಿ ಇದ್ದಾಗ ಮಾತ್ರ ನೀರು ಕೆರೆಯಲ್ಲಿ ನಿಲ್ಲುತ್ತದೆ' ಎನ್ನುತ್ತಾ ಕೆರೆಯ ಕುರಿತು ಕೆಲವು ವೈಜ್ಞಾನಿಕ ವಿಷಯಗಳನ್ನು ತಿಳಿಸಿದರು.

ಪರಿಸರ ಸಂರಕ್ಷಕರಾದ ಬೆಂಗಳೂರು ಜಿಲ್ಲೆ ಆನೇಕಲ್ ತಾಲೂಕಿನ ರಾಮಕೃಷ್ಣ ವಿದ್ಯಾಕೇಂದ್ರದ ವಿಷ್ಣುಮಯಾನಂದರಿಗೆ ಶ್ರೀ ಶ್ರೀಗಳವರು ಹಾಗೂ ಪೇಜಾವರ ಶ್ರೀ ಶ್ರೀಗಳವರು ವೃಕ್ಷಲಕ್ಷ ಪರಿಸರ ಪ್ರಶಸ್ತಿಯನ್ನು ನೀಡಿ ಸಂಮಾನಿಸಿದರು. ಸಂಮಾನ ಸ್ವೀಕರಿಸಿದ ಅವರು 'ಯೋಜನೆಗಳು, ರೂಪು-ರೇಷೆಗಳು ಕೇವಲ ಕಾಗದಗಳಲ್ಲಿ ಮತ್ತು ಮಂಡನೆಯಲ್ಲಿಯೇ ಮುಗಿಯ ಬಾರದು. ಅದು ಕಾರ್ಯಗತವಾಗಬೇಕು' ಎಂದು ಕರೆನೀಡಿದರು. ಸಭೆಯಲ್ಲಿ ಸಹ್ಯಾದ್ರಿ ವಿಜ್ಞಾನಿ ಮತ್ತು ಯುವವಿಜ್ಞಾನಿ ಪ್ರಶಸ್ತಿಯನ್ನು ಪ್ರದಾನಮಾಡಲಾಯಿತು. ಶ್ರೀಮಠದ ಉಪಾಧ್ಯಕ್ಷ ವಿ. ಎನ್. ಹೆಗಡೆ ಬೊಮ್ನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಟಿ. ವಿ. ರಾಮಚಂದ್ರ ವರದಿ ವಾಚಸಿದರೆ, ಶಾಂತಾರಾಮ ಸಿದ್ಧಿ ನಿರ್ಣಯವನ್ನು ವಾಚಿಸಿದರು. ಬೆಳಗಿನಿಂದ ಅನೇಕ ಮೌಲಿಕ ಪ್ರಬಂಧಗಳು ಮಂಡಿಸಲ್ಪಟ್ಟವು.

ಪಶ್ಚಿಮ ಘಟ್ಟದ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ-ನಿರ್ವಹಣೆ ಕುರಿತು ನವೆಂಬರ್ 13, 14, 15 ರಂದು ಸಸ್ಯಲೋಕ, ಗ್ರಾಮಾಭ್ಯುದಯ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು, ವೃಕ್ಷಲಕ್ಷ ಆಂದೋಲನ ಮೊದಲಾದ ಸಂಸ್ಥೆಗಳ ಆಶ್ರಯದಲ್ಲಿ **ಕೆರೆ ಸಮ್ಮೇಲನ 2014** ಕಾರ್ಯಕ್ರಮ ಜರುಗಿತು. ನ. 13 ರಂದು ಶ್ರೀಮಠದಲ್ಲಿ ಶ್ರೀ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ರಾಸಾಯನಿಕ ಹಾಗೂ ಗೊಬ್ಬರ ವಿಭಾಗದ ಸಚಿವ ಅನಂತಕುಮಾರ ಸಮ್ಮೇಲನಕ್ಕೆ ಚಾಲನೆ ನೀಡಿದರು.

ಶ್ರೀ ಅನಂತ ಅಶೀಸರ ಅವರು 'ರಾಜ್ಯದ 25000 ಸಾವಿರ ಸಣ್ಣ ಕೆರೆಗಳ ಅಭಿವೃದ್ಧಿ ಆಗಬೇಕಿದೆ ಕರಾವಳಿ ಅಳಿವೆಗಳ ಸಮಸ್ಯೆ ಪರಿಹರಿಸಲು ಹಸಿರು ಕವಚ ಯೋಜನೆ ಅನುಷ್ಠಾನ ಆಗಬೇಕು' ಎಂದರು. ಪರಿಸರ ಚಿಂತಕ ಬಿ. ಎಂ. ಕುಮಾರಸ್ವಾಮಿ ನದೀ ಜೋಡನೆ ಅಪಾಯ ತಿಳಿಸಿ ಕೈಬಿಡಲು ಕೇಂದ್ರ ಸರಕಾರಕ್ಕೆ ಮನವಿ ಮಾಡಿದರು. ಶಾಸಕ ವಿಶ್ವೇಶ್ವರ ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ವಾಗ್ದೇವಿ ಶಿಕ್ಷಣ ಸಂಸ್ಥೆ ಪ್ರಮುಖ ಹರೀಶ, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಮುಖ ಟಿ. ವಿ. ರಾಮಚಂದ್ರ, ಮತ್ತು ಸುಭಾಸಚಂದ್ರನ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಅತ್ಯುತ್ತಮವಾಗಿ ಕೆರೆ ಸಂರಕ್ಷಿಸಿದ ಸಾಗರ ತಾಲೂಕು ಜಿಗಳೆಮನೆ ಕೆರೆ ಸಂರಕ್ಷಣಾ ತಂಡವನ್ನು ಶ್ರೀ ಶ್ರೀಗಳವರು ಸಂಮಾನಿಸಿ ಆಶೀರ್ವದಿಸಿದರು. ಉದ್ಘಾಟನಾ ಸಮಾರಂಭದ ನಂತರ ಕೆರೆ ಸಂರಕ್ಷಣೆ ಕುರಿತು ತಜ್ಞರಿಂದ ಪ್ರಬಂಧಗಳು ಮಂಡಿತವಾದವು.

ಎರಡನೇ ದಿನದ ಗೋಷ್ಠಿ ನ. 14 ರಂದು ಶಿರಸಿ ಲಯನ್ಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆಯಿತು. ಗೋಷ್ಠಿಯನ್ನು ಉದ್ಘಾಟಿಸಿದ ಖ್ಯಾತ ಪರಿಸರವಾದಿ ಸುರೇಶ ಹೆಬ್ಳಿಕರ್ ಮಾತನಾಡಿ ನೀರಿನ ಉತ್ಪಾದನೆ ಅಸಾಧ್ಯ. ಆದರೆ ಕರೆಮೂಲಗಳನ್ನು ಉಳಿಸುವ ಮೂಲಕ ನೀರಿನ ಶಕ್ತಿಯನ್ನು ಹೆಚ್ಚಿಸಬಹುದು. ಅತ್ತ ಗಮನ ಹರಿಸಬೇಕು ಎಂದರು. ಲಯನ್ಸ್ ಶಾಲೆಯ ಅಧ್ಯಕ್ಷ ಪ್ರಭಾಕರ ಹೆಗಡೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು, ತಜ್ಞರು ಪ್ರಬಂಧ ಮಂಡಿಸಿದರು. ಅನಂತ ಅಶೀಸರ, ಪ್ರೊ॥ ಬಿ. ಎಂ. ಕುಮಾರ ಸ್ವಾಮಿ, ಎಂ.ಡಿ. ಸುಭಾಶ್ಚಂದ್ರನ್ ವೇದಿಕೆಯಲ್ಲಿದ್ದರು.

## ಕುಂದೂರು ಶಾಲೆ ಸುವರ್ಣ ಮಹೋತ್ಸವ

ನವೆಂಬರ್ 14 ರಂದು ಕುಂದೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರ ಜರುಗಿತು. ಶ್ರೀ ಶ್ರೀಗಳವರು ಸಾನ್ನಿಧ್ಯವಿತ್ತು ಕಾರ್ಯಕ್ರಮ ಉದ್ಘಾಟಿಸಿ 'ಇಂದಿನ ಮಕ್ಕಳಿಗೆ ದೈಹಿಕ, ಬೌದ್ಧಿಕ ಶಿಕ್ಷಣಗಳೊಂದಿಗೆ ವ್ಯಕ್ತಿತ್ವ ರೂಪಿಸುವ ಆಧ್ಯಾತ್ಮಿಕ ತಿಳಿವಳಿಕೆಯನ್ನೂ ನೀಡಬೇಕು' ಎಂದು ಎಚ್ಚರಿಸಿದರು. ಸಭೆಯಲ್ಲಿ ಜಿ.ಪಂ. ಸದಸ್ಯ ರಾಘವೇಂದ್ರ ಭಟ್, ಟಿ.ಎಂ.ಎಸ್. ಅಧ್ಯಕ್ಷ ಆರ್. ಎನ್. ಹೆಗಡೆ ಗೋರ್ಸಗದ್ದೆ, ವಿ॥ ನಾಗೇಂದ್ರ ಭಟ್ ಭರಣಿ, ಸಹಕಾರಿ ಧುರೀಣ ಎನ್.ಎಸ್. ಹೆಗಡೆ ಕುಂದರಗಿ, ರಾ.ರಾ. ರಂಗ ಸಮೂಹದ ರಾಮಕೃಷ್ಣ ಭಟ್ ಧಂಡಿ ಮಾತನಾಡಿದರು. ಶ್ರೀ ಶ್ರೀಗಳವರು ನಿವೃತ್ತ ಶಿಕ್ಷಕರನ್ನು ಹಾಗೂ ಸಾಮಾಜಿಕ ಪ್ರಮುಖರನ್ನು ಸಂಮಾನಿಸಿ ಆಶೀರ್ವದಿಸಿದರು.